ಸಾಕ್ಷಿಯು ಕ್ರಮವಾಗಿ ಪ್ರಮಾಣೀಕರಿಸಿದ ದಿನಾಂಕಃ 16-11-2018

ಪಾಟಿ ಸವಾಲುಃ ಶ್ರೀ ಬಿ ಎಂ ವೈ ವಕೀಲರಿಂದ

ನಾನು ಮೊದಲು ಕೃಷಿ ಮಾಡುತ್ತಿದ್ದೇನು . ಈಗ ನಾನು ಶನಿವಾರಸಂತೆಯ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಲೈಬ್ರರಿಯಲ್ಲಿ ಲೈಬ್ರರಿಯನ್ ಆಗಿ ಕೆಲಸ ಮಾಡುತ್ತಿದ್ದೇನೆ . ನಮ್ಮ ವಕೀಲರಿಗೆ ನನ್ನ ಪ್ರಮಾಣ ಪತ್ರ ಬರೆಯುವ ಸಲುವಾಗಿ ನಾನೇ ಮಾಹಿತಿ ನೀಡಿದ್ದೇನೆ . ನಾನು ವಾಸವಿರುವ ಮನೆಯನ್ನು ನಾನು ರಂಗಸ್ವಾಮಿ ಎನ್ನುವವರಿಂದ ಖರೀದಿ ಮಾಡಿರುವೆನು . ಖರೀದಿ ಪತ್ರದ ಮೂಲ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ . ಮೂಲ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೇನು ತೊಂದರೆ ಇಲ್ಲ. ನಾನು ಖರೀದಿ ಮಾಡಿರುವ ಜಾಗವು ಸರ್ವೆ ನಂ 77/1 ರಲ್ಲಿ ಬರುತ್ತದೆ . ನಾನು ಹಾಗೇ ಖರೀದಿ ಮಾಡಿದ ಜಾಗದ ವಿಸ್ತೀರ್ಣ 2 ಸೆಂಟ್ಸ್ ನಾನು ಖರೀದಿ ಮಾಡುವ ಕಾಲಕ್ಕೆ ನಾನು ಖರೀದಿ ಮಾಡಿದ ಸ್ಥಳದ ಸರ್ವೆ ಮಾಡಿಸಿಲ್ಲ. ನಾನು ಖರೀದಿ ಮಾಡುವ ಕಾಲಕ್ಕೆ ಸ್ಥಳದಲ್ಲಿ ಬೇಲಿ ಇದ್ದುರಿಂದ ಅದರಂತೆ ನಾನು ಕ್ರಯಕ್ಕೆ ಪಡೆದಿರುವೆನು . ನಾನು ಖರೀದಿ ಮಾಡಿದ ಜಾಗದ ಚಕ್ ಬಂಧಿ ಹೇಳಲು ಬರುತ್ತದೆ . ಪೂರ್ವಕ್ಕೆ ಲೀಲಾಧರ್ ಎನ್ನುವವರ ಮನೆ , ಪಶ್ಚಿಮಕ್ಕೆ ಮಂಜುನಾಥರವರ ಮನೆ , ಉತ್ತರಕ್ಕೆ ಮಂಜುನಾಥರವರ ಜಾಗಕ್ಕೆ ಸೇರಿದ ಹಿತ್ತಲು ಹಾಗೂ ದಕ್ಷಿಣಕ್ಕೆ ರಸ್ತೆ ಇದೆ . ಮಂಜುನಾಥ ಎಂದರೆ ಈ ದಾವೆಯ ವಾದಿ . ಕ್ರಯ ಪತ್ರವನ್ನು ಜಗಧೀಶ್ ಎನ್ನುವವರು ಬರೆದಿರುತ್ತಾರೆ . ಮತ್ತು ಖರೀದಿ ಪತ್ರ ಆಗುವ ಸಮಯಕ್ಕೆ ಮಾಹಿತಿಗಳನ್ನು ನಾನೇ ನೀಡಿದ್ದೆನೆ . ವಾದಿಗೆ ಸೇರಿಗೆ ಜಾಗದ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ವಾದಿಗೆ ಸದರಿ ಸ್ಥಳದಲ್ಲಿ ಒಟ್ಟು 30 ಸೆಂಟ್ಸ್ ನಷ್ಟು ಜಾಗವಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುವರು .

ಮುಂದುವರಿದ ಪಾಟಿ ಸವಾಲನ್ನು ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.
(ನನ್ನ ಉಕ್ತಲೇಕನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇ ಕೇ ಸರಿ ಇದೆ

Sd/-

ಪ್ರ ದ ನ್ಯಾ ದಂ., ಸೋಮವಾರಪೇಟೆ.